ಶ್ರೀ ಬಿ. ಎಸ್. ಚಂದ್ರಶೇಖರಯ್ಯ.—ಮಾನ್ಯ ಅಧ್ಯಕ್ಷರೇ, ಈ ಮೇಲ್ಕಂಡ ವರದಿಯನ್ನು ಮಾನ್ಯ ಸಭೆಯು ಒಪ್ಪಿಕೊಳ್ಳಬೇಕೆಂದು ನಾನು ಸೂಚನೆ ಮಾಡುತ್ತೇನೆ.

ಅಧ್ಯಕ್ಷರು.—ಮೇಲ್ಕಂಡ ವರದಿಯಂನ್ನು ಸಭೆಯ ಮಂಡಿಸಲಾಯಿತು.

ಶ್ರೀ ಜಿ. ಎಸ್, ಬಾಗಲಕೋಟಿ.—ಮಾನ್ಯ ಅಧ್ಯಕ್ಷರೇ, ಹಕ್ಕುಬಾಧ್ಯತಾ ಸಮಿತಿಯ ಮೊದಲನೇ ವರದಿಯನ್ನು ಮಾನ್ಯ ಸಭೆಗೆ ಒಪ್ಪಿಸುತ್ತಿದ್ದೇನೆ.

ಶ್ರೀ ಬಿ. ಜಿ. ಕೊಟ್ರಪ್ಪ.—ಮಾನ್ಯ ಅಧ್ಯಕ್ಷರೇ, ಅಧೀನ ಶಾಸನ ರಚನಾ ಸಮಿತಿಯ ಮೂರನೇ ವರದಿಯನ್ನು ಸಭೆಗೆ ಒಪ್ಪಿಸುತ್ತಿದ್ದೇನೆ.

ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್.—ಮಾನ್ಯ ಅಧ್ಯಕ್ಷರೇ, ಲೋಕೋಪಯೋಗಿ ಜಲಾನಯನ ಅಭಿವೃದ್ಧಿ ಮತ್ತು ವಿದ್ಯುಚ್ಛಕ್ತಿ ಇಲಾಖೆಗೆ ಸಂಬಂಧಿಸಿದಂತೆ ಕರ್ನಾಟಕ ವಿಧಾನ ಸಭೆಯ ಭರವಸೆಗಳ ಸಮಿತಿಯ ಎರಡನೇ ವರದಿಯನ್ನು ಸಭೆಗೆ ಒಪ್ಪಿಸುತ್ತಿದ್ದೇನೆ.

ಅಧ್ಯಕ್ಷರು.—ಮೇಲ್ಕಂಡ ವರದಿಗಳನ್ನು ಸಭೆಗೆ ಒಪ್ಪಿಸಲಾಗಿದೆ.

೫. ಅರ್ಜಿಗಳನ್ನೊಪ್ಪಿಸುವುದು

ಶ್ರೀ ಬಿ. ಲಕ್ಕಪ್ಪ.—ಮಾನ್ಯ ಅಧ್ಯಕ್ಷರೇ, ಚಿಕ್ಕನಾಯಕನಹಳ್ಳಿ ತಾಲ್ಲೂಕಿನ ಹಿರಿಯೂರು ಹೋಬಳಿಯಲ್ಲೇನಾಡು ಗ್ರಾಮಕ್ಕೆ ಕುಡಿಯುವ ನೀರನ್ನು ಒದಗಿಸುವ ಸಂಬಂಧದ ಬಗ್ಗೆ ಅರ್ಜಿಯನ್ನು ಮಾನ್ಯ ಸಭೆಯ ಮುಂದೆ ಒಪ್ಪಿಸುತ್ತಿದ್ದೇನೆ.

ಶ್ರೀ ಟಿ. ಬಿ. ಓಂಕಾರಮೂರ್ತಿ.—ಮಾನ್ಯ ಅಧ್ಯಕ್ಷರೇ, ಕಡೂರು ತಾಲ್ಲೂಕಿನ ಕುಂಕನಾಡು-ಗಂಗನಹಳ್ಳಿಗಳ ಮೂಲಕ ಹಾದುಹೋಗುವ ಪಂಚನಹಳ್ಳಿಯನ್ನು ಸೇರುವ ರಸ್ತೆಯನ್ನು ಡಾಂಬರೀಕರಣಗೊಳಿಸುವ ಬಗ್ಗೆ ಅರ್ಜಿಯನ್ನು ಮಾನ್ಯ ಸಭೆಯ ಮುಂದೆ ಒಪ್ಪಿಸುತ್ತಿದ್ದೇನೆ.

ಅಧ್ಯಕ್ಷರು.—ಮೇಲ್ಕಂಡ ಅರ್ಜಿಗಳನ್ನು ಸಭೆಗೆ ಒಪ್ಪಿಸಲಾಗಿದೆ.

ಶಾಸನ ರಚನಾ ಕಾರ್ಯಕ್ರಮಗಳು

ಸದನದಲ್ಲಿ ಮಂಡನೆ ಮಾಡಿರತಕ್ಕ (೧) ಕರ್ನಾಟಕ ವಿಧಾನ ಮಂಡಲದ ಸಂಬಳ, ನಿವೃತ್ತಿ ವೇತನ ಮತ್ತು ಭತ್ಯೆಗಳ (ತಿದ್ದುಪಡಿ) ವಿಧೇಯಕ ಮತ್ತು (೨) ಕರ್ನಾಟಕ ಸಚಿವರುಗಳ ಸಂಬಳ ಮತ್ತು ಭತ್ಯೆಗಳ (ತಿದ್ದುಪಡಿ) ವಿಧೇಯಕ ಇವುಗಳನ್ನು ವಾಪಸ್ಸು ತೆಗೆದುಕೊಂಡಿರುವುದು.

ಶ್ರೀ ಎ. ಲಕ್ಷ್ಮೀಸಾಗರ್.—ತಮ್ಮ ಅನುಮತಿ ಕೇಳಿ, ಈಗ ಇಂಟ್ರಡ್ಯೂಸ್ ಮಾಡಿರತೆಕ್ಕ ೧೯೮೭ನೇ ಇಸವಿಯ ಕರ್ನಾಟಕ ವಿಧಾನ ಮಂಡಲದ ಸಂಬಳ, ನಿವೃತ್ತಿ ವೇತನ ಮತ್ತು ಭತ್ಯೆಗಳ (ತಿದ್ದುಪಡಿ) ವಿಧೇಯಕವನ್ನು ಮತ್ತು ಅದೇ ರೀತಿ ೧೯೮೭ನೇ ಇಸವಿಯ ಕರ್ನಾಟಕ ಸಚಿವರುಗಳ ಸಂಬಳ ಮತ್ತು ಭತ್ಯೆಗಳ (ತಿದ್ದುಪಡಿ) ವಿಧೇಯಕ ಇವೆರಡನ್ನು ವಾಪಸ್ಸು ತೆಗೆದುಕೊಳ್ಳುವುದಕ್ಕೆ ತಮ್ಮ ಅನುಮತಿಯನ್ನು ಬೇಡುತ್ತೇನೆ.

ಅಧ್ಯಕ್ಷರು.—ಪ್ರಸ್ತಾವ ಏನೆಂದರೆ—"ಈ ಸದನದಲ್ಲಿ ಮಂಡಿಸಿರತಕ್ಕ ಮೇಲ್ಕಂಡ ಕರ್ನಾಟಕ ವಿಧಾನ ಮಂಡಲದ ಸಂಬಳ, ನಿವೃತ್ತಿ ವೇತನ ಮತ್ತು ಭತ್ಯೆಗಳ (ತಿದ್ದುಪಡಿ) ವಿಧೇಯಕವನ್ನು ಮತ್ತು ಕರ್ನಾಟಕ ಸಚಿವರುಗಳ ಸಂಬಳ ಮತ್ತು ಭತ್ಯೆಗಳ (ತಿದ್ದುಪಡಿ) ಈ ಎರಡು ವಿಧೇಯಕಗಳನ್ನು ವಾಪಸ್ಸು ತೆಗೆದುಕೊಳ್ಳಲು ಅನುಮತಿ ನೀಡುವುದು....."

(ಪ್ರಸ್ತಾವನೆಯನ್ನು ಅನುಮೋದಿಸಲಾಯಿತು ಮತ್ತು ತಿದ್ದುಪಡಿ ಮಸೂದೆಗಳನ್ನು ವಾಪಸ್ಸು ಪಡೆಯಲು ಅನುಮತಿ ನೀಡಲಾಯಿತು)